

ತಿಂಮನ ತಲೆಯ ಬೀchi ಜೊತೆ ರತ್ನನ ಪದಗಳ ಜಿ.ಪಿ. ರಾಜರತ್ನಂ



ಪಿ.ಬಿ.ಶ್ರೀನಿವಾಸ್ ಮತ್ತು ಎಸ್.ಪಿ.ಬಾಲಸುಬ್ರಹ್ಮಣ್ಯಂ ನಡುವೆ ಕೆ.ಎಸ್.ಎಲ್ ಸ್ವಾಮಿ



ರಾಜ್ ಜೊತೆ ಗೊರೂರು ಮತ್ತು ಹುಣಸೂರು ಕೃಷ್ಣಮೂರ್ತಿ



ಎಂ.ಆರ್. ವಿಠ್ಠಲ್, ಎನ್. ಲಕ್ಷ್ಮೀನಾರಾಯಣ್ ಮತ್ತು ಪುಟ್ಟಣ್ಣ ಕಣಗಾಲ್



ಪ್ರೊ. ಹುಚ್ಚೂರಾಯ ಮುಹೂರ್ತ ದ್ವಾರಕೀಶ್ ಹಾಗೂ ನರಸಿಂಹರಾಜು

**ಚಿತ್ರಪಟ ಕಥನ**

ಛಾಯಾಚಿತ್ರಗಳು ಪ್ರದರ್ಶನದಲ್ಲಿವೆ. ಸಿನಿಮಾಗೆ ಸಂಬಂಧಿಸದ ಈ ಛಾಯಾಚಿತ್ರಗಳು 30–40ರ ದಶಕವನ್ನು ಬಿಂಬಿಸಲಿವೆ.

## ಬಣ್ಣದಲೋಕದೊಂದಿಗೆ ಪ್ರಗತಿಯ ನಂಟು

ಕನ್ನಡ ಚಿತ್ರರಂಗದ ಹಲವು ಪ್ರಮುಖ ಸಂಗತಿಗಳಿಗೆ ‘ಪ್ರಗತಿ’ ಸ್ಟುಡಿಯೊ ಸಾಕ್ಷಿಯಾಗಿದೆ. 1965ರಲ್ಲಿ ಅಶ್ವತ್ಥ್ ಅವರು ತಮ್ಮ ಛಾಯಾಗ್ರಹಣ ವೃತ್ತಿ ಆರಂಭಿಸಿದರು. ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರ ‘ಬೆಳ್ಳಿ ಮೋಡ’ ಚಿತ್ರಕ್ಕೆ ಸ್ಥಿರಚಿತ್ರ ಛಾಯಾಗ್ರಾಹಕರಾಗಿ ವೃತ್ತಿ ಜೀವನಕ್ಕೆ ಪದಾರ್ಪಣೆ ಮಾಡಿದ ಅವರು ಸುಮಾರು 300ಕ್ಕೂ ಹೆಚ್ಚು ಸಿನಿಮಾಗಳಿಗೆ ಸ್ಥಿರಚಿತ್ರ ಛಾಯಾಗ್ರಾಹಕರಾಗಿ ಕೆಲಸ ಮಾಡಿದ್ದಾರೆ.

‘ಮೊದಲು ಕನ್ನಡ ಚಿತ್ರರಂಗ ಇದ್ದಿದ್ದು ಮದ್ರಾಸಿನಲ್ಲಿ. 70ರ ದಶಕದಲ್ಲಿ ಕರ್ನಾಟಕಕ್ಕೆ ಸ್ಥಳಾಂತರಗೊಳ್ಳುತ್ತಿದ್ದ ಆ ಸಂದರ್ಭ ನನ್ನ ಸಹೋದರ ನಾಗೇಶ ಬಾಬು ಜೊತೆ 1972ರಲ್ಲಿ ಗಾಂಧಿ ನಗರದಲ್ಲಿ ಚಲನಚಿತ್ರಗಳಿಗೆ ಮೀಸಲಾದ ಪ್ರಗತಿ ಸ್ಟುಡಿಯೊ ತೆರೆದೆವು. ಅದೃಷ್ಟವಶಾತ್ ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ದ್ವಾರಕೀಶ್, ರವಿ ಅವರಂಥ ಖ್ಯಾತರೊಂದಿಗೆ ಕೆಲಸ ಮಾಡುವ ಅವಕಾಶ ದೊರೆಯಿತು’ ಎಂದು ನೆನಪುಗಳನ್ನು ಮೆಲುಕು ಹಾಕುತ್ತಾರೆ ಅಶ್ವತ್ಥ್.

## ಮೂರು ಲಕ್ಷ ಛಾಯಾಚಿತ್ರಗಳ ಸಂಗ್ರಹ

ನಾಲ್ಕೂವರೆ ದಶಕಗಳ ಕಾಲ ಅಶ್ವತ್ಥ್ ಅವರ ವೃತ್ತಿ ಜೀವನದಲ್ಲಿ ತೆಗೆದ ಚಲನಚಿತ್ರಗಳ ಸ್ಥಿರಚಿತ್ರಗಳು, ನಟ–ನಟಿಯರು ಹಾಗೂ ತಂತ್ರಜ್ಞರ ವಿಶೇಷ ಫೋಟೊಗಳು, ಕನ್ನಡ ಚಿತ್ರರಂಗದ ಸ್ಮರಣೀಯ ಸಮಾರಂಭಗಳಲ್ಲಿ ತೆಗೆದಿರುವ ಸುಮಾರು 3 ಲಕ್ಷದಷ್ಟು ಮೂಲ ನೆಗೆಟಿವ್‌ಗಳನ್ನು ಸಂರಕ್ಷಿಸಿದ್ದಾರೆ. ಏಳೆಂಟು ವರ್ಷಗಳಿಂದ 70–80 ಸಾವಿರದಷ್ಟು ನೆಗೆಟಿವ್‌ಗಳನ್ನು ಡಿಜಿಟಲ್ ಮಾದರಿಗೆ ಪರಿವರ್ತಿಸಿದ್ದಾರೆ.

‘ಆಗ ಛಾಯಾಗ್ರಹಣ ನೆಗೆಟಿವ್ ಫಾರ್ಮ್ಯಾಟ್ ಆಗಿತ್ತು. ಏನು ಫೋಟೊ ತೆಗೆದಿದ್ದೇವೆ ಎಂಬುದು ಮನೆಗೆ ಹೋಗಿ ಪ್ರಾಸೆಸ್ ಮಾಡಿದ ಮೇಲೆಯೇ ತಿಳಿಯುತ್ತಿದ್ದುದು. ಪ್ರಾಸೆಸ್ ಮಾಡಿ ನೋಡುವವರೆಗೂ ಭಯ ಇರುತ್ತಿತ್ತು. ಒಂದು ಫ್ರೇಮ್ ಹೋದರೆ ದುಡ್ಡು ಕೂಡ ಹೋಗುತ್ತಿತ್ತು. ಹೀಗಾಗಿ ಫೋಟೊ ತೆಗೆಯಬೇಕಾದರೆ ಜಾಗರೂಕರಾಗಿರುತ್ತಿದ್ದೆವು. ಜೊತೆಗೆ, ಛಾಯಾಗ್ರಾಹಕರು ಫೋಟೊ ತೆಗೆಯುವುದರಿಂದ ಹಿಡಿದು ಅದನ್ನು ಪ್ರಾಸೆಸ್ ಮಾಡಿ ಪ್ರಿಂಟ್ ತೆಗೆಯುವ ಪ್ರತಿ ಕೆಲಸವನ್ನು ಕಲಿತಿರಬೇಕಾಗಿತ್ತು. ಈಗ ಮಾತು ಬರದ ಮಗು ಕೂಡ ಫೋಟೊ ತೆಗೆಯುವಷ್ಟು ತಂತ್ರಜ್ಞಾನ ಬೆಳೆದಿದೆ’ ಎಂದು ಛಾಯಾಗ್ರಹಣದಲ್ಲಿ ಆಗಿದ್ದ ಸವಾಲನ್ನು ಮುಂದಿಡುತ್ತಾರೆ ಅವರು.

ಪ್ರತಿಕ್ರಿಯಿಸಿ: feedback@sudha.co.in